ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಸುತ್ತೋಲೆ/ಸ.ಪ್ರ.ದ.ಕಾ/ಆಯವ್ಯಯ/04/2023-24.

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:9/01.2024

ಇವರಿಗೆ.
ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
ಮಾನ್ಯರೇ,

ವಿಷಯ: 2023-24ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಗೌರವಧನಕ್ಕಾಗಿ ನವಂಬರ್-2023ರ ಮಾಹೆಗೆ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಬಳಸಿಕೊಂಡು ಉಳಿಕೆ ಅನುದಾನವನ್ನು ಮರುಒಪ್ಪಿಸುವ ಕುರಿತು

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ:ಇಡಿ/171/ಡಿಸಿಇ2023, ದಿನಾಂಕ:28.08.2023.
2.ಪತ್ರ ಸಂಖ್ಯೆ: ಕಾಶಿಇ/ನೇವಿ-1/ಅಉಅ/90/2023-24, ದಿನಾಂಕ:24.08.2023, 13.09.2023 ಮತ್ತು ದಿನಾಂಕ:21.09.2023
3.ಈ ಕಛೇರಿಯ ಅನುದಾನ ಬಿಡುಗಡೆಯ ಆದೇಶದ ದಿನಾಂಕ:05.12.2023.

ಪ್ರಸ್ತಾಪಿತ ವಿಷಯ ಹಾಗೂ ಉಲ್ಲೇಖಿತ 1&2 ಪತ್ರಗಳಿಗೆ ಸಂಬಂಧಿಸಿದಂತೆ ಕಾಲೇಜು ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2023-24ನೇ ಸಾಲಿನಲ್ಲಿ ಹೆಚ್ಚುವರಿ ಕಾರ್ಯಭಾರಕ್ಕೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಉಲ್ಲೇಖ (03)ರ ಆದೇಶದಲ್ಲಿ ನವೆಂಬರ್-2023ರ ಮಾಹೆಗೆ ಗೌರವಧನವನ್ನು ಮರುಒಪ್ಪಿಸಲು ಸೂಚಿಸಲಾಗಿದೆ.

ಆದರೆ ಕೆಲವು ಕಾಲೇಜುಗಳ ಪ್ರಾಂಶುಪಾಲರ ಖಜಾನೆ-2 ಹಂತದಲ್ಲಿ ಅನುದಾನವನ್ನು ಬಳಸಿಕೊಳ್ಳದೇ ಉಳಿಕೆಯಾಗಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಎಲ್ಲಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ಅತಿಥಿ ಉಪನ್ಯಾಸಕರ ಅನುಮೋದನೆಯನ್ನು ಕಡ್ಡಾಯವಾಗಿ ಪಡೆದು ಕಾಲೇಜುಗಳಿಗೆ ಹಾಜರಾಗಿ ಕರ್ತವ್ಯ ನಿರ್ವಹಿಸಿರುವ ಅವಧಿಗೆ ಮಾತ್ರ ಗೌರವಧನವನ್ನು ಪಾವತಿಸಿ ಅನುದಾನವನ್ನು ಬಳಸಿಕೊಳ್ಳಲು ಹಾಗೂ ಉಳಿಕೆ ಅನುದಾನವನ್ನು ಮರುಒಪ್ಪಿಸಲು ಸೂಚಿಸಲಾಗಿದೆ.

ಮುಂದುವರೆದು ಡಿಸೆಂಬರ್-2023ರ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯವನ್ನು ನಿರ್ವಹಿಸಿದ ಅತಿಥಿ ಉಪನ್ಯಾಸಕರಿಗೆ ಕರ್ತವ್ಯ ನಿರ್ವಹಿಸಿದ ಅವಧಿಗೆ ಮಾತ್ರ ಅವಶ್ಯಕವಾಗಿರುವ ಗೌರವಧನದ ಮಾಹಿತಿಯನ್ನು ಗೂಗಲ್ ಫಾರಂನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಇಮೇಲ್ ವಿಳಾಸ:dcegfbudget@gmail.Comಗೆ ಎಕ್ಸೆಲ್‌ಫಾರ್ಮೆಟ್‌ನಲ್ಲಿ <u>ದಿನಾಂಕ:11.01.2024</u> ರೊಳಗೆ ಕಳುಹಿಸಿಕೊಡಲು ಸೂಚಿಸಲಾಗಿದೆ. ನಿಗಧಿತ ಅವಧಿಯೊಳಗೆ ಗೌರವಧನದ ಮಾಹಿತಿಯನ್ನು ಸಲ್ಲಿಸದೇ ಇರುವ ಕಾಲೇಜುಗಳಿಗೆ ಗೌರವಧನವನ್ನು ತಡೆಹಿಡಿಯಲಾಗುವುದು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ನಿಗದಿತ ದಿನಾಂಕದೊಳಗೆ ಪಾವತಿಸಲು ಸಾಧ್ಯವಾಗದಿದ್ದಲ್ಲಿ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಬಿಡುಗಡೆಗೊಳಿಸಿದ ಅನುದಾನವನ್ನು ವೆಚ್ಚ ಮಾಡದಿದ್ದಲ್ಲಿ ಹಿಂಪಡೆಯಲಾಗುವುದು.
(ಟಿಪ್ಪಣಿಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.)

ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ

ಪ್ರತಿಯನ್ನು.

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ ವಿಭಾಗ, ಬೆಂಗಳೂರು- ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಕ್ತಕ್ರಮಕ್ಕಾಗಿ.
2. ಅಧೀಕ್ಷಕರು/ಮ್ಯಾನೇಜರ್, ನೇಮಕಾತಿ ವಿಭಾಗ-1, ಕೇಂದ್ರಕಛೇರಿ, ಬೆಂಗಳೂರು- ಮಾಹಿತಿಗಾಗಿ
3. ಕಛೇರಿ ಪ್ರತಿ.